# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :** | 1165 |
| **ಮಾನ್ಯ ಸದಸ್ಯರ ಹೆಸರು :** | ಶ್ರೀ ಎಂ.ಸಿ.ವೇಣುಗೋಪಾಲ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ :** | 16.03.2020 |
| **ಉತ್ತರಿಸುವ ಸಚಿವರು :** | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಹಿಂದುಳಿದ ವರ್ಗಗಳ ವ್ಯಾಪ್ತಿಗೆ ಬರುವ ಸಮಾಜದ ಅಭಿವೃದ್ಧಿ ನಿಗಮಗಳು ಎಷ್ಟು; ಅವುಗಳಿಗೆ ನೀಡಿರುವ ಅನುದಾನವೆಷ್ಟು; ಎಷ್ಟು ಅಭಿವೃದ್ಧಿ ನಿಗಮಗಳು ಕಚೇರಿಯನ್ನು ಪ್ರಾರಂಭಿಸಿವೆ; ಅದರ ಸಿಬ್ಬಂದಿ ಎಷ್ಟು; | ಹಿಂದುಳಿದ ವರ್ಗಗಳ ವ್ಯಾಪ್ತಿಗೆ ಬರುವ ಸಮಾಜದ ಅಭಿವೃದ್ಧಿ ನಿಗಮಗಳು ಒಟ್ಟು-07;<br>ಅವುಗಳಿಗೆ ನೀಡಿರುವ ಅನುದಾನ ಒಟ್ಟು ರೂ.22477ಲಕ್ಷಗಳು;<br>ಒಟ್ಟು 4 ಅಭಿವೃದ್ಧಿ ನಿಗಮಗಳ ಕಚೇರಿಗಳನ್ನು ಪ್ರಾರಂಭಿಸಲಾಗಿದೆ;<br>**ನಿಗಮ ಹಾಗೂ ಮಂಜೂರಾದ ಸಿಬ್ಬಂದಿಗಳ ವಿವರ:**<br>1. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ - 392<br>2. ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ - 06<br>3. ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ - 06<br>4. ವಿಶ್ವಕರ್ಮ ಅಭಿವೃದ್ಧಿ ನಿಗಮ - 12 |
| ಆ. | ಸವಿತಾ ಸಮಾಜ ಮತ್ತು ಮಡಿವಾಳ ಸಮಾಜದ ಕಚೇರಿಗಳನ್ನು ಆರಂಭಿಸದಿರಲು ಕಾರಣಗಳೇನು; ಸಿಬ್ಬಂದಿ ಹಾಗೂ ಅಧ್ಯಕ್ಷರು ಮತ್ತು ನಿರ್ದೇಶಕರನ್ನು ಇದುವರೆಗೂ ನೇಮಕ ಮಾಡದಿರುವ ಕಾರಣಗಳೇನು (ವಿವರ ನೀಡುವುದು); | ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮಗಳನ್ನು ಕ್ರಮವಾಗಿ ದಿನಾಂಕ: 27.11.2019 ಮತ್ತು 24.12.2019 ಕಂಪನಿ ಅಧಿನಿಯಮ 2013ರನ್ವಯ ನೋಂದಾಯಿಸಿ ಸ್ಥಾಪಿಸಲಾಗಿದೆ. ಪ್ರಸ್ತುತ ಈ ನಿಗಮಗಳಿಗೆ ಆರ್ಥಿಕ ಇಲಾಖೆಯಿಂದ ಯಾವುದೇ ಹುದ್ದೆಗಳು ಮಂಜೂರು ಆಗದಿರುವ ಹಿನ್ನೆಲೆಯಲ್ಲಿ ಈ ನಿಗಮದ ಕಾರ್ಯಚಟುವಟಿಕೆಗಳನ್ನು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ಮೂಲಕ ಕಾರ್ಯ ನಿರ್ವಹಿಸಲಾಗುತ್ತಿದೆ. |

| | | |
|---|---|---|
| | | ಅಧ್ಯಕ್ಷರು ಹಾಗೂ ನಿರ್ದೇಶಕರುಗಳನ್ನು ನೇಮಕ ಮಾಡುವುದು ಸರ್ಕಾರದ ವಿವೇಚನೆಗೆ ಒಳಪಟ್ಟಿರುತ್ತದೆ. |

ಸಂಖ್ಯೆ: ಹಿಂವಕ 53 ಬಿಸಿಎ 2020

(ಶ್ರೀ ಬಿ.ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು